Series : EFGH/S

SET ~ 4

Q.P. Code **13/S**

Roll No.

Candidates must write the Q.P. Code on the title page of the answer-book.

**ಸೂಚನೆ / NOTE :**

(I) ಈ ಪ್ರಶ್ನೆ ಪತ್ರಿಕೆಯಲ್ಲಿ **19** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.

Please check that this question paper contains **19** printed pages.

(II) ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.

Q.P. Code given on the right hand side of the question paper should be written on the title page of the answer-book by the candidate.

(III) ಈ ಪ್ರಶ್ನೆ ಪತ್ರಿಕೆಯಲ್ಲಿ **15** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.

Please check that this question paper contains **15** questions.

(IV) **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಯಥಾಸ್ಥಾನದಲ್ಲಿ ಬರೆಯಿರಿ.**

**Please write down the Serial Number of the question in the answer-book at the given place before attempting it.**

(V) ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the candidates will read the question paper only and will not write any answer on the answer-book during this period.

#

# ಕನ್ನಡ

# KANNADA

*ಅನುಮತಿಸಲಾದ ಸಮಯ : **3** ಗಂಟೆ* | *ಗರಿಷ್ಠ ಅಂಕಗಳು : **80***

*Time allowed : **3** hours* | *Maximum Marks : **80***

***General Instructions :***

***Read the following instructions carefully :***

*(i)* *This question paper is divided into* ***four*** *sections. It has total* ***15*** *questions.*

*(ii)* ***Section A :*** *4 questions no. 1, 2, 3, 4.*

*(iii)* ***Section B :*** *3 questions no. 5, 6, 7.*

*(iv)* ***Section C :*** *3 questions no. 8, 9, 10.*

*(v)* ***Section D :*** *5 questions no. 11, 12, 13, 14, 15.*

*Attempt questions as per specific instructions.*

*Write question no. in answer book before attempting it.*

***ಸಾಮಾನ್ಯ ಸೂಚನೆಗಳು :***

***ಕೆಳಗಿನ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿ :***

*(i)* *ಈ ಪ್ರಶ್ನೆ ಪತ್ರಿಕೆಯನ್ನು* ***ನಾಲ್ಕು*** *ವಿಭಾಗಗಳಾಗಿ ಒಳಗೊಂಡಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು* ***15*** *ಪ್ರಶ್ನೆಗಳಿವೆ.*

*(ii)* ***ವಿಭಾಗ A*** *: 4 ಪ್ರಶ್ನೆ ಸಂಖ್ಯೆ 1, 2, 3, 4.*

*(iii)* ***ವಿಭಾಗ B*** *: 3 ಪ್ರಶ್ನೆ ಸಂಖ್ಯೆ 5, 6, 7.*

*(iv)* ***ವಿಭಾಗ C*** *: 3 ಪ್ರಶ್ನೆ ಸಂಖ್ಯೆ 8, 9, 10.*

*(v)* ***ವಿಭಾಗ D*** *: 5 ಪ್ರಶ್ನೆ ಸಂಖ್ಯೆ 11, 12, 13, 14, 15.*

*ನೀಡಿರುವ ನಿರ್ದಿಷ್ಟ ಸೂಚನೆಗಳಂತೆ ಉತ್ತರಿಸಿ.*

*ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಹಾಳೆಯಲ್ಲಿ ಪ್ರಶ್ನೆ ಸಂಖ್ಯೆಯನ್ನು ನಮೂದಿಸಿ.*

## PART – 1 : (40 ಅಂಕಗಳು)

## SECTION A

## (Unseen Passage, Seen Prose & Poem)

## ವಾಚನ ಮತ್ತು ಗ್ರಹಿಕಾ ಕೌಶಲ : 20 ಅಂಕಗಳು

1. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. *5×1=5*

ಪ್ರತಿ ವರ್ಷ ಜೂನ್ 23 ಅಂತಾರಾಷ್ಟ್ರಿಯ ಒಲಿಂಪಿಕ್ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ. ಒಲಿಂಪಿಕ್ ಜಗತ್ತಿನ ಪ್ರಮುಖ ಕ್ರೀಡಾಕೂಟಗಳಲ್ಲಿ ಒಂದು. ಈ ಕ್ರೀಡಾಕೂಟಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಈ ಕ್ರೀಡಾಕೂಟವು ಅಂತಾರಾಷ್ಟ್ರೀಯ ಕ್ರೀಡಾಕೂಟವಾಗಿದೆ. ಈ ಅಂತಾರಾಷ್ಟ್ರೀಯ ಒಲಿಂಪಿಕ್ ದಿನವನ್ನು ದೈಹಿಕ ಸಾಮರ್ಥ್ಯ ಮತ್ತು ಕ್ರೀಡೆಗಳಿಗಾಗಿ ಮೀಸಲಿಡಲಾಗಿದೆ. ಈ ಕ್ರೀಡಾಕೂಟವನ್ನು ಬೇಸಿಗೆ ಮತ್ತು ಚಳಿಗಾಲದ ಕ್ರೀಡಾಕೂಟವೆಂದು ವಿಂಗಡಿಸಲಾಗಿದೆ.

ಒಲಿಂಪಿಕ್ ಕ್ರೀಡಾಕೂಟದ ಮೂಲ ಗ್ರೀಸ್ ದೇಶದ್ದಾಗಿದೆ. ಒಲಿಂಪಿಯಾದಲ್ಲಿ ಮೊದಲ ಬಾರಿಗೆ ಆಯೋಜನೆ ಮಾಡಲಾಗಿತ್ತು. ಮೂರ್ನಾಲ್ಕು ಶತಮಾನ ದವರಿಗೆ ಈ ಕೂಟವನ್ನು ಆಯೋಜನೆ ಮಾಡುತ್ತ ಬರಲಾಗುತ್ತಿತ್ತು. ಆದರೆ ಬಳಕ ಈ ಕ್ರೀಡಾಕೂಟವನ್ನು ನಿಲ್ಲಿಸಲಾಯಿತು. ನಂತರ ಮತ್ತೇ ಇದಕ್ಕೆ ಚಾಲನೆ ಸಿಕ್ಕಿದ್ದು 1859ರಲ್ಲಿ ಇವಾಂಜೆಲಾಸ್ ಝಪ್ಪಾನ್ ಎಂಬಾತನಿಂದ. ಬಳಿಕ 1894 ರಲ್ಲಿ ಫ್ರಾನ್ಸ್‌ನ ಪಿಯರೆ-ಡಿ-ಕ್ಯೂಬರ್ತಿನ್ ಎಂಬುವವರು ಅಂತರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯನ್ನು ಹುಟ್ಟುಹಾಕಿ, ಆಧುನಿಕ ಒಲಿಂಪಿಕ್ಸ್‌ನ ಪುನರುಜ್ಜೀವನಕ್ಕಾಗಿ ಶ್ರಮಿಸಿದ. ಇವರನ್ನು ಆಧುನಿಕ ಒಲಿಂಪಿಕ್ಸ್‌ನ ಪಿತಾಮಹ ಎಂದು ಪರಿಗಣಿಸಲಾಗಿದೆ. 1896 ರಲ್ಲಿ ಪ್ರಥಮ ಬಾರಿಗೆ ಗ್ರೀಸ್‌ನ ಈಗಿನ ರಾಜಧಾನಿ ಅಥೆನ್ಸ್ ನಗರದಲ್ಲಿ ಮೊದಲ ಆಧುನಿಕ ಬೇಸಿಗೆ ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು. ಬಿಳಿಬಣ್ಣ ಧ್ವಜದಲ್ಲಿರುವ ಐದು

ವರ್ತುಲಗಳು ಒಂದಕ್ಕೊಂದು ಹೆಣೆದುಕೊಂಡಿದ್ದು ಕೆಂಪು, ನೀಲಿ, ಹಸಿರು, ಹಳದಿ ಮತ್ತು ಕಪ್ಪು ಬಣ್ಣಗಳಿಂದ ಕೂಡಿವೆ. ಇವು ಜಗತ್ತಿನ ಐದು ಜನವಸತಿಯುಳ್ಳ ಭೂಖಂಡಗಳನ್ನು ಪ್ರತಿನಿಧಿಸುತ್ತವೆ. ವರ್ತುಲಗಳ ಬಣ್ಣವು ಯಾವುದೇ ನಿರ್ದಿಷ್ಟ ಖಂಡವನ್ನು ಪ್ರತಿನಿಧಿಸುವುದಿಲ್ಲ. ಇವು ಪರಸ್ಪರ ಸಂಪರ್ಕವನ್ನು ಸೂಚಿಸುತ್ತವೆ ಮತ್ತು ಸಂಕೇತವೂ ಹೌದು.

ಮೊದಲ ಅಂತಾರಾಷ್ಟ್ರೀಯ ಒಲಿಂಪಿಕ್ ದಿನವನ್ನು 1948 ರ ಜೂನ್ 23 ರಂದು ಆಚರಿಸಲಾಯಿತು. ಇದರಲ್ಲಿ ಒಟ್ಟು ಒಂಬತ್ತು ದೇಶಗಳು ಭಾಗವಹಿಸಿದ್ದವು. ಪ್ರತಿವರ್ಷ ಹೊಸ ಹೊಸ ಘೋಷ ವಾಕ್ಯದೊಂದಿಗೆ ಅಂತಾರಾಷ್ಟ್ರೀಯ ಒಲಿಂಪಿಕ್ ದಿನವನ್ನು ಆಚರಿಸಲಾಗುತ್ತದೆ. 2024 ರ ಘೋಷವಾಕ್ಯ 'ಚಲಿಸೋಣ ಮತ್ತು ಆಚರಿಸೋಣ'. ಇದು ಸಮಿತಿಯ ಪ್ರಕಾರ, ಜನರು ಸಕ್ರಿಯವಾಗಿರಲು ಮತ್ತು ಕ್ರೀಡೆಗಳ ಮೂಲಕ ಸಂಪರ್ಕ ಹೊಂದಲು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ.

ಒಲಿಂಪಿಕ್ಸ್‌ನ ಮೌಲ್ಯಗಳು ಕಾಲಾನಂತರದಲ್ಲಿ ಬದಲಾಗಿವೆ. ಮೂಲ ಒಲಿಂಪಿಕ್ಸ್‌ನ ಮೌಲ್ಯಗಳು "ಪ್ರಯತ್ನವನ್ನು ಉತ್ತೇಜಿಸುವುದು" "ಮಾನವ ಘನತೆಯನ್ನು ಕಾಪಾಡುವುದು" ಮತ್ತು "ಸಾಮರಸ್ಯವನ್ನು ಅಭಿವೃದ್ಧಿಪಡಿಸುವುದು" ಆಗಿದ್ದವು. ಆಧುನಿಕ ಒಲಿಂಪಿಕ್ಸ್‌ನ ಮೌಲ್ಯಗಳು ಶ್ರೇಷ್ಠತೆ, ಗೌರವ ಮತ್ತು ಸ್ನೇಹ; ಈ ಮೌಲ್ಯಗಳು ಒಲಿಂಪಿಕ್ ಆಂದೋಲನದ ಅಡಿಪಾಯವಾಗಿವೆ. ಇದು ಉತ್ತಮ ಜಗತ್ತನ್ನು ನಿರ್ಮಿಸಲು ವಿಶ್ವದಾದ್ಯಂತ ಕ್ರೀಡೆ, ಸಂಸ್ಕೃತಿ ಮತ್ತು ಶಿಕ್ಷಣವನ್ನು ಉತ್ತೇಜಿಸಲು ಪ್ರಯತ್ನಿಸುತ್ತದೆ.

**ಪ್ರಶ್ನೆಗಳು :**

(i) ಒಲಿಂಪಿಕ್ ಕ್ರೀಡಾಕೂಟವನ್ನು ____________ ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ.

(A) 3

(B) 5

(C) 4

(D) 6

(ii) ಅಂತಾರಾಷ್ಟ್ರೀಯ ಒಲಿಂಪಿಕ್ ದಿನವನ್ನು ____________ ಮತ್ತು ____________ ಮೀಸಲಿಡಲಾಗಿದೆ.

(A) ದೈಹಿಕ ಸಾಮರ್ಥ್ಯ - ಮನರಂಜನೆಗಾಗಿ

(B) ದೈಹಿಕ - ಮಾನಸಿಕ ಸಾಮರ್ಥ್ಯಗಳಿಗಾಗಿ

(C) ದೈಹಿಕ ಸಾಮರ್ಥ್ಯ - ಕ್ರೀಡೆಗಳಿಗಾಗಿ

(D) ಕ್ರೀಡೆ - ಕ್ರೀಡೆಗಳಿಗಾಗಿ

(iii) ____________ ಇವರನ್ನು ಆಧುನಿಕ ಒಲಿಂಪಿಕ್ಸ್‌ನ ಪಿತಾಮಹ ಎನ್ನುವರು.

(A) ಗ್ಯಾರಿ ಸೋಬರ್ಸ್

(B) ಇವಾಂಜೆಲಾಸ್ ಝಪ್ಪಾನ್

(C) ಗೋರ್ಬಚೋವ್

(D) ಪಿಯರೆ ಡಿ ಕ್ಯೂಬರ್ತಿನ್

(iv) ಬಿಳಿಬಣ್ಣದ ಧ್ವಜದಲ್ಲಿರುವ ಐದು ವರ್ತುಲಗಳು ಪರಸ್ಪರ _________ ಸೂಚಿಸುತ್ತವೆ.

(A) ಸೌಹಾರ್ದತೆಯನ್ನು

(B) ಸಂಪರ್ಕವನ್ನು

(C) ಸಂಕಲ್ಪವನ್ನು

(D) ಗೆಳೆತನವನ್ನು

(v) ಆಧುನಿಕ ಒಲಿಂಪಿಕ್ಸ್ ಮೌಲ್ಯಗಳು ____________ ____________ ಮತ್ತು ____________ .

(A) ಶ್ರೇಷ್ಠತೆ, ಗೌರವ, ಶ್ರೀಮಂತಿಕೆ

(B) ಶ್ರೇಷ್ಠತೆ, ಗರ್ವ, ಸ್ನೇಹ

(C) ಗೌರವ, ಚಂಚಲತೆ, ಸ್ನೇಹ

(D) ಶ್ರೇಷ್ಠತೆ, ಗೌರವ, ಸ್ನೇಹ

**2.** ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. *5×1=5*

ವಲಸೆ ಹೋಗುವ ಹಕ್ಕಿಗಳು ಪ್ರಕೃತಿದತ್ತವಾಗಿ ಸಾವಿರಾರು ಕಿ. ಮೀ. ಹಾರುವ ಸಾಮರ್ಥ್ಯವನ್ನು ಹೊಂದಿವೆ. ವಲಸೆ ಪ್ರಯಾಣಗಳು ಬಹುದೂರದ ಗುರಿಯಾಗಿದ್ದರೂ. ಎಷ್ಟೇ ಬಳಲಿಕೆಯಾದರೂ ಅದನ್ನೆಲ್ಲ ಮೆಟ್ಟಿ ಹಕ್ಕಿಗಳು ತಮ್ಮ ಗುರಿಯನ್ನು ತಲುಪುತ್ತವೆ. ಋತುಮಾನಕ್ಕೆ ಅನುಗುಣವಾಗಿ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವ ಪಕ್ಷಿ ಸಂಕುಲ ಹಾಗೂ ಅವುಗಳ ವಾಸಸ್ಥಾನಗಳ ರಕ್ಷಣೆಗಾಗಿ ಜಾಗೃತಿ ಮೂಡಿಸಲು ಪ್ರತಿವರ್ಷ ಅಕ್ಟೋಬರ್ 10 ರಂದು ವಿಶ್ವ ವಲಸೆ ಹಕ್ಕಿಗಳ ದಿನವನ್ನಾಗಿ 2006 ರಿಂದ ಆಚರಿಸಲಾಗುತ್ತದೆ. ವಿಶ್ವದ ಹಲವಾರು ರಾಷ್ಟ್ರಗಳಲ್ಲಿ ಈ ದಿನ ಪಕ್ಷಿಗಳ ರಕ್ಷಣೆಗಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ವಲಸೆ ಹಕ್ಕಿಗಳಿಗೆ ಎದುರಾಗುವ ಅಪಾಯ, ಪರಿಸರ ಸಮತೋಲನದಲ್ಲಿ ವಲಸೆ ಹಕ್ಕಿಗಳ ಪಾತ್ರ ಹಾಗೂ ಹಕ್ಕಿಗಳನ್ನು ಸಂರಕ್ಷಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತಾಗಿ ಅವಲೋಕಿಸಲು ಈ ದಿನ ಮುಡುಪಾಗಿದೆ. ಈ ದಿನದಂದು ಅನೇಕ ಕಡೆಗಳಲ್ಲಿ ಪಕ್ಷಿ ಹಬ್ಬ, ಹಕ್ಕಿಗಳ ಕುರಿತಾದ ಶೈಕ್ಷಣಿಕ ಕಾರ್ಯಕ್ರಮ ಹಾಗೂ ಪಕ್ಷಿ ವೀಕ್ಷಣೆ ಮುಂತಾದ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

ಹಕ್ಕಿಗಳ ವಲಸೆ ಪ್ರಕ್ರಿಯೆಯು ಪ್ರಕೃತಿಯ ಅದ್ಭುತಗಳಲ್ಲಿ ಒಂದಾಗಿದೆ ಋತುಮಾನಗಳು ಬದಲಾದಂತೆ ಆಹಾರ ಅರಸುತ್ತ, ಸಂತಾನೋತ್ಪತ್ತಿಗಾಗಿ ಹಾಗೂ ಮರಿಗಳ ಪಾಲನೆ-ಪೋಷಣೆಗಾಗಿ ಹಕ್ಕಿಗಳು ನೂರಾರು, ಸಾವಿರಾರು ಕಿ.ಮೀ. ಪಯಣಿಸುವುದು ಸೋಜಿಗವೇ ಸರಿ ಜಾಗತಿಕವಾಗಿ ಅವಲೋಕಿಸಿದಲ್ಲಿ ಪಕ್ಷಿಗಳು ಭೂಮಿಯ ಉತ್ತರ ಭಾಗದಿಂದ ಶೀತ ವಾತಾವರಣದ ದಕ್ಷಿಣ ಭಾಗಗಳಿಗೆ ವಲಸೆ ಹೋಗುವುದು ಕಂಡು ಬರುತ್ತದೆ ಆದರೂ ಕೆಲ ಪಕ್ಷಿಗಳು ಆಫ್ರಿಕಾದ ದಕ್ಷಿಣ ಭಾಗದಲ್ಲಿ

ಮರಿಹಾಕಿ ಅಲ್ಲಿಂದ ಉತ್ತರ ಭಾಗದ ಶೀತ ಸ್ಥಳಗಳಿಗೆ ತೆರಳುತ್ತವೆ. ಇನ್ನು ಚಳಿಗಾಲದಲ್ಲಿ ಸಮುದ್ರದ ದಂಡೆಯಲ್ಲಿ ವಾಸಿಸುವ ಕೆಲ ಪಕ್ಷಿಗಳು ಬೇಸಿಗೆಯಲ್ಲಿ ಬೆಟ್ಟ ಹತ್ತಿ ಹೋಗುತ್ತವೆ. ರೆಡ್‌ನಾಟ್ ಎಂಬ ಹೆಸರಿನ ಮಧ್ಯಮ ಗಾತ್ರದ ಪಕ್ಷಿಯು ವರ್ಷಕ್ಕೆ ಎರಡು ಬಾರಿ ಸುಮಾರು ಹದಿನಾರು ಸಾವಿರ ಕಿ.ಮೀ. ಪಯಣಿಸುವ ಮೂಲಕ ಅತಿ ಹೆಚ್ಚು ದೂರ ಸಾಗುವ ಪಕ್ಷಿ ಎಂಬ ಖ್ಯಾತಿಯನ್ನು ಪಡೆದಿದೆ.

ವಾಯುಮಾಲಿನ್ಯವು ಸ್ಥಳೀಯ ಪಕ್ಷಿಗಳಿಗೆ ಮಾತ್ರವಲ್ಲದೆ ವಲಸೆ ಹಕ್ಕಿಗಳಿಗೂ ಅಪಾಯವನ್ನು ತಂದೊಡ್ಡಿದೆ. ಅತಿಯಾದ ವಾಯುಮಾಲಿನ್ಯದಿಂದ ವಲಸೆ ಹಕ್ಕಿಗಳು ತಾವು ಬಂದ ಉದ್ದೇಶವು ಈಡೇರದೆ ಕೆಲ ಬಾರಿ ವಲಸೆ ಸ್ಥಳದಲ್ಲಿಯೇ ಸಾವಿಗೀಡಾಗುತ್ತವೆ. ಅಕ್ರಮವಾಗಿ ಪಕ್ಷಿಗಳ ಬೇಟೆಯು ಹಕ್ಕಿಗಳಿಗೆ ಮಾರಕವಾಗಿ ಪರಿಣಮಿಸುತ್ತಿದೆ. ವಲಸೆ ಬಂದ ಹಕ್ಕಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಆಹಾರ ಸಿಗದೆ ಅವು ಸಾಯುವ ಪ್ರಕರಣಗಳು ಕೂಡ ಹೆಚ್ಚಾಗುತ್ತಿವೆ. ಹಕ್ಕಿಗಳ ವಾಸಸ್ಥಳಗಳನ್ನು ಮಾನವರು ಆಕ್ರಮಿಸಿಕೊಳ್ಳುತ್ತಿರುವುದರಿಂದ ಹಕ್ಕಿಗಳ ವಾಸಕ್ಕೆ ಹಾಗೂ ಸಂತಾನೋತ್ಪತ್ತಿಗೆ ಸೂಕ್ತ ತಾಣಗಳು ಸಿಗದಂತಾಗಿದೆ. ಇದು ವಲಸೆ ಹಕ್ಕಿಗಳಿಗೆ ಎದುರಾಗುತ್ತಿರುವ ಆಪಾಯಗಳು.

**ಪ್ರಶ್ನೆಗಳು :**

(i) ______________ ರಂದು ವಿಶ್ವವಲಸೆ ಹಕ್ಕಿಗಳ ದಿನವನ್ನಾಗಿ ಆಚರಿಸಲಾಗುತ್ತದೆ.

(A) ಅಕ್ಟೋಬರ್, 5

(B) ಅಕ್ಟೋಬರ್, 10

(C) ನವೆಂಬರ್, 10

(D) ಅಕ್ಟೋಬರ್, 20

(ii) ವಿಶ್ವ ವಲಸೆ ಹಕ್ಕಿಗಳ ದಿನದಂದು __________ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

(A) ಧಾನ್ಯ ಹಬ್ಬ

(B) ಸಾಂಸ್ಕೃತಿಕ ಕಾರ್ಯಕ್ರಮ

(C) ಪ್ರಾಣಿ ವೀಕ್ಷಣೆ

(D) ಪಕ್ಷಿ ವೀಕ್ಷಣೆ

(iii) ಸಮುದ್ರದ ದಂಡೆಯಲ್ಲಿ ವಾಸಿಸುವ ಕೆಲ ಪಕ್ಷಿಗಳು ____________ ಬೆಟ್ಟ ಹತ್ತಿ ಹೋಗುತ್ತವೆ.

(A) ಬೇಸಿಗೆಯಲ್ಲಿ

(B) ಚಳಿಗಾಲದಲ್ಲಿ

(C) ಹಗಲಿನಲ್ಲಿ

(D) ಮಳೆಗಾಲದಲ್ಲಿ

(iv) __________ ಇದು ಅತಿ ಹೆಚ್ಚು ದೂರ ಸಾಗುವ ಪಕ್ಷಿ ಎಂಬ ಖ್ಯಾತಿಯನ್ನು ಪಡಿದಿದೆ.

(A) ಹಾರ್ನ್‌ಬಿಲ್

(B) ಕಿಂಗ್‌ಫಿಶರ್

(C) ರೆಡ್‌ನಾಟ್

(D) ಸ್ಪ್ಯಾರೋ

(v) ಅಕ್ರಮವಾಗಿ ಪಕ್ಷಿಗಳ ಬೇಟೆಯು ಹಕ್ಕಿಗಳಿಗೆ __________ ಪರಿಣಮಿಸುತ್ತಿದೆ.

(A) ತಾರಕವಾಗಿ

(B) ಮಾರಕವಾಗಿ

(C) ನೋವಾಗಿ

(D) ಅಪಾಯಕಾರಿಯಾಗಿ

3. ಕೆಳಗೆ ಕೊಟ್ಟಿರುವ ಎ.ಎನ್. ಮೂರ್ತಿರಾವ್ ಅವರು ಬರೆದಿರುವ ವ್ಯಾಘ್ರಗೀತೆ ಪರಿಚಿತ ಗದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. *5×1=5*

ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದದ್ದು ಇಷ್ಟು. ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿ ಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದಸ್ಥಳಕ್ಕೆ ಕಾಲು ಹರಿದಾರಿಯಿದೆ ಎನ್ನುವಾಗ ಎತ್ತುಗಳು ಏನು ಮಾಡಿದರೂ ಮುಂದೆ ಹೋಗದೆ ಕಣಿ ಹಾಕಿಕೊಂಡವು ಅದೇ ವೇಳೆಗೆ ಎದೆ ನಡುಗುವಂತೆ ಹುಲಿಯ ಗರ್ಜನೆ ಕೇಳಸಿತು. ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು ಆದರೆ ರೈತರ ಮಾತು ಕೇಳಿ ಬಂದ ಮೇಲೆ ನಿರಾಶೆಯಿಂದಲೂ ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು. ಗಾಡಿಯವರು ಐದು ಜನವಿದ್ದರೂ ಎಷ್ಟೇ ಆಗಲಿ ಹುಲಿಯೆಂದರೆ ಭಯವಲ್ಲವೆ ! ಸ್ವಲ್ಪ ಹೊತ್ತು ಗಾಡಿಯ ಬಳಿಯಲ್ಲೇ ನಿಂತು ನೋಡಿದರು ಮತ್ತೆ ಗರ್ಜನೆ ಕೇಳಲಿಲ್ಲ ಅನಂತರ ಅವರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದುವರಿದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

ಮೊದಲೆ ಹೇಳಿದಂತೆ ಶಾನುಭೋಗರು ಗಟ್ಟಿ ಮನಸ್ಸಿನವರು ಬೇಗ ಚೇತರಿಸಿಕೊಂಡೆದ್ದು ನಡೆದ ಸಂಗತಿಯನ್ನೆಲ್ಲಾ ನೆನಪಿಗೆ ತಂದುಕೊಂಡರು. ಮೈಕೈ ಸ್ವಲ್ಪ ನಡುಗುತ್ತಿತ್ತೇ ಹೊರತು ಅವರಿಗೆ ಮೈಯಲ್ಲಿ ಗಾಯವೇನೂ ಆಗಿರಲಿಲ್ಲ. ಹುಲಿಯ ಭಯವೇನೋ ಕಳೆದಿತ್ತು. ಖಿರ್ದಿ ಪುಸ್ತಕವನ್ನು ಮತ್ತೆ ಪಡೆದು ಭದ್ರಮಾಡಿಕೊಂಡದ್ದಾಯಿತು ಆದರೆ ಅವರ ಮನಸ್ಸನ್ನೆಲ್ಲಾ ವಿಸ್ಮಯ ಆವರಿಸಿತ್ತು. ತಾವು ಉಳಿದದ್ದು ಹೇಗೆ ? ನಿಸ್ಸಹಾಯಕರಾಗಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾಗ ಹುಲಿ ತಮ್ಮನ್ನು ಎಳೆದು

ಕೊಂಡು ಹೋಗಲಿಲ್ಲವೇಕೆ ? ಸ್ವಲ್ಪ ಹೊತ್ತು ಯೋಚಿಸಿ ಗಾಡಿಯವರನ್ನು ಕೇಳಿದರು. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ ?" ಎಂದು ಇಲ್ಲ, ಅವರು ಬಿದ್ದಿದ್ದದ್ದು ಬೆನ್ನು ಮೇಲಾಗಿ. ಶಾನುಭೋಗರ ಸಮಸ್ಯೆಗೆ ಉತ್ತರ ದೊರೆತಂತಾಯಿತು. ಕೊನೆಯವರೆಗೂ ಆ ಪ್ರಾಣಿ ತನ್ನ ಕುಲಧರ್ಮವನ್ನು ಪಾಲಿಸಿಕೊಂಡೇ ಬಂದಿತು. ಉದಾರ ಹೃದಯರಾದ ಶಾನುಭೋಗರ ಬಾಯಿಂದ 'ಭಲೆ' ಎಂಬ ಮೆಚ್ಚಿಕೆಯ ಮಾತು ಹೊರಟಿತು ಸಂದರ್ಭವನ್ನರಿಯದ "ಈ ಶಾನುಭೋಗರಿಗೆ ಹುಚ್ಚು ಹಿಡಿಯಿತೋ" ಎನ್ನುವಂತೆ ನೋಡುತ್ತಿದ್ದ ಗಾಡಿಯವರಿಗೆ ಅಂದಿನ ಕಥೆಯನ್ನೆಲ್ಲಾ ಹೇಳಿದರು.

ಶಾನುಭೋಗರು "ಕುಡಿದ ನೀರು ಅಲುಗದ ಹಾಗೆ" ಎನ್ನಲಾಗದಿದ್ದರೂ ಜೀವ ಸಹಿತ ಮನೆ ಸೇರಿಕೊಂಡರು. ರಸದೂಟವನ್ನು ಮಾಡಿದರು "ಹುಲಿ ಈಗ ಎಷ್ಟು ಹಸಿದಿರಬೇಕು" ಎಂಬ ಯೋಚನೆ ಬಂದಾಗ ಅವರ ವದನಾರವಿಂದದಲ್ಲಿ ಮುಗುಳುನಗೆ ಮೂಡಿತು, ಊಟದ ರುಚಿ ಇಮ್ಮಡಿಯಾಯಿತು. ಅವರಿಗೆ ಅರೆ ನಿಮಿಷದ ಅವಕಾಶವನ್ನು ಒದಗಿಸಿಕೊಟ್ಟು ಪ್ರಾಣವನ್ನು ಕಾಪಾಡಿದ ಆ ಖಿರ್ದಿ ಪುಸ್ತಕ ಎಂದಿನಂತೆ ತನ್ನ ಜೀರ್ಣವಸ್ತ್ರದ ಹೊದಿಕೆಯಲ್ಲಿ ತೊತಿಯಲ್ಲಿ ವಿಶ್ರಾಂತಿ ಪಡೆಯುತ್ತಿತ್ತು. ಶಾನುಭೋಗರ ದೃಷ್ಟಿಯು ಅನಂತವಾತ್ಸಲ್ಯದಿಂದ, ಕೃತಜ್ಞತೆಯಿಂದ, ಆ ಕಡೆಗೆ ಹೊರಳಿತು.

ಆ ಶಾನುಭೋಗರಂತೂ ಈಗ ಇಲ್ಲ ಆದರೆ ಖಿರ್ದಿ ಪುಸ್ತಕ ಇಂದಿಗೂ ಭದ್ರವಾಗಿದೆ. ದೇವರ ಮಂದಾಸನದ ಮೇಲೆ ಮಂಡಿಸಿ ಶಾನುಭೋಗರ ಸಂತತಿಯವರಿಂದ ಈಗರೂ ಪೂಜೆಯನ್ನು ಕೈಗೊಳ್ಳುತ್ತಿದೆ. ಅವರೆಲ್ಲರ ಕೃತಜ್ಞತೆಯೂ ಅದಕ್ಕೆ ಸಂದಿದೆ. ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ, ಹುಲಿಯ ಧರ್ಮ ಶ್ರದ್ಧೆಯಿಂದ. ಆ ಗುಣವನ್ನು ಹಾಡಿ ಹೊಗಳುವ ಭಾಗ್ಯ ನನ್ನ ಪಾಲಿಗೆ ಬಂದಿದೆ.

ಪ್ರಶ್ನೆಗಳು :

(i) ರೈತರು ಎಲ್ಲಿಂದ ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು ?

(ii) ರೈತರ ಮಾತು ಕೇಳಿ ಬಂದ ಮೇಲೆ ಹುಲಿ ಏನು ಮಾಡಿತು ?

(iii) ಶಾನುಭೋಗರ ಬಾಯಿಂದ 'ಭಲೆ' ಎಂಬ ಮೆಚ್ಚಿಕೆಯ ಮಾತು ಹೊರಡಲು ಕಾರಣವೇನು ?

(iv) ಖಿರ್ದಿ ಪುಸ್ತಕ ಎಲ್ಲಿ ವಿಶ್ರಾಂತಿ ಪಡೆಯುತ್ತಿತ್ತು ?

(v) ಶಾನುಭೋಗರು ಉಳಿದದ್ದು ಯಾವುದರಿಂದ ?

**4.** ಈ ಕೆಳಗೆ ಕೊಟ್ಟಿರುವ ಡಾ. ಬಿ.ಓಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ ಪರಿಚಿತ 'ಹಲಗಲಿ ಬೇಡರು' ಲಾವಣಿಯನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. *5×1=5*

ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡಿಯುವ ಜನಕ
ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೊ. ದಡಕ ||೧||
ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ
ಹಲಗರಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ
ಪೂಜೇರ ಹನುಮಾ ಬ್ಯಾಡರಬಾಲ ಜಡಗರಾಮ ಮಸಲತ್ತ
ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ
ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ
ಹೊಡೆರಿ ಜಗಳ ಕೂಡಿ ತೀರ್ತೀದು ಕುಮರಿ ನಮ್ಮದ್ಯಾವತ್ತ
ಒಳಗಿಂದೊಳಗ ವಚನ ಕೊಟ್ಟಿರೊ ಬ್ಯಾಡರೆಲ್ಲ ಕಲ್ತ.
ಕಾರಕೂನನ ಕಪಾಳಕ ಬಡಿದರ ಸಿಪಾಯಿ ನೆಲಕಬಿತ್ತ
ಆಗಿಂದಾಗ ದುಃಖದ ಸುದ್ದಿ ಸಾಹೇಬಗ ಹೋಯ್ತು ||೧||

ಸಿಟ್ಟಿಲಿ ಮುಂಗೈ ಕಟ್ಟನೆ ಕಡಕೊಂಡ ಹುಕುಮ ಕೊಬ್ಬ ಸಾಹೇಬಾಗ
ಕುದರಿ ಮಂದಿ ಕೂಡಿ ಮುಟ್ಟಿತೊ ಹಲಗಲಿ ತಳದ ಮ್ಯಾಗ
ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿನ ಸಿಡಿಲ ಸಿಡಿದ್ಹಾಂಗ
ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೊ ಹಿಡಿದು ದಂಗ
ಕಾಗದ ಬರೆದು ಕಳುವ್ಯಾರೆ ಬೇಗ, ದಂಡು ಬರಲೆಂತ ಹೀಂಗ
ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ ||೨||
ಬೆನ್ನಬೆನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದಂಗ
ನಡುವೆ ಹಾಕ್ಕೊಂಡು ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ
ಚಟೆಕಾರರು ಚೌಕಿ ಮಾಡುತ, ನಡಿದರೊ ಹೇಳದೆ ಗುಡದಾಗ
ಅಗಸಿಗೆ ಬಂದು 'ಹೆಬಲಕ' ಸಾಬ ಹೇಳತಾನ ಬುದ್ಧಿಮಾತ
ಕೊಡತಿವಿ ಕಬುಲ ಕೇಳರಿ ಮಾತ, ಹೋಗ ಬ್ಯಾಡರಿ ಸತ್ತ
ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊ ಮುಂದಿತ್ತ

**ಪ್ರಶ್ನೆಗಳು :**

(i) ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು ?

(ii) ಹಲಗಲಿಯ ನಾಲ್ವರು ಪ್ರಮುಖರು ಯಾರು ?

(iii) ನಿಡಿಲು ಸಿಡಿದ ಹಾಗೆ ಏನು ಸಿಡಿದವು ?

(iv) ಸಾಹೇಬ ಕಾಗದ ಬರೆದು ಕಳಿಸಿದ್ದು ಏಕೆ ?

(v) ಚಟೆಕಾರರು ಚೌಕಿ ಮಾಡುತ ಎಲ್ಲಿಗೆ ನಡೆದರು ?

## SECTION B

### (Grammar, Nondetailed Portion)

### ಅನ್ವಯಿಕ ವ್ಯಾಕರಣ ಮತ್ತು ಪಠ್ಯ ಪೂರಕ ಅಧ್ಯಯನ : 20 ಅಂಕಗಳು

**5.** ಕೆಳಗಿನ ಪ್ರತಿಯೊಂದು ಬಹು ಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. *10×1=10*

(i) ಕೆಳಗೆ ಕೊಟ್ಟಿರುವ ಸಂಧಿ ಮತ್ತು ಸಂಧಿ ಪದಗಳನ್ನು ಹೊಂದಿಸಿ ಬರೆಯಿರಿ.

| | |
|---|---|
| a. ಸಂಪನ್ನರಾದ | 1. ಆದೇಶ ಸಂಧಿ |
| b. ನಿಜಾಶ್ರಮ | 2. ಅನುನಾಸಿಕ ಸಂಧಿ |
| c. ತನ್ಮಯ | 3. ಲೋಪ ಸಂಧಿ |
| d. ಕಡುವೇಳ್ಪು | 4. ಗುಣ ಸಂಧಿ |
| | 5. ಸವರ್ಣ ದೀರ್ಘ ಸಂಧಿ |

(A) a-3, b-5, c-1, d-4
(B) a-3, b-5, c-2, d-1
(C) a-2, b-5, c-3, d-1
(D) a-4, b-5, c-4, d-2

(ii) ಆರ್ಯ, ಕ್ಷಣ - ಈ ಪದಗಳ ತದ್ಭವ ರೂಪಗಳು

(A) ಅಜ್ಜ - ಕ್ಷಣ

(B) ಅಜ್ಜ - ತಕ್ಷಣ

(C) ಅಜ್ಜ - ಚಣ

(D) ಅಯ್ಯ - ಕಣ

(iii) ನಡುರಾತ್ರಿ - ಈ ಪದ ____________ ಉದಾಹರಣೆಯಾಗಿದೆ ?

(A) ಕ್ರಿಯಾ ಸಮಾಸಕ್ಕೆ

(B) ಅಂಶಿ ಸಮಾಸಕ್ಕೆ

(C) ದ್ವಂದ್ವ ಸಮಾಸಕ್ಕೆ

(D) ಕರ್ಮಧಾರೆಯ ಸಮಾಸಕ್ಕೆ

(iv) ಚಿಕ್ಕ ಮಕ್ಕಳ ಆಟಪಾಠಗಳನ್ನು ಮತ್ತೆ ಮತ್ತೆ ನೋಡಲು ಬಲು ಚೆನ್ನ - ಇಲ್ಲಿರುವ ಜೋಡು ನುಡಿ.

(A) ಮತ್ತೆ ಮತ್ತೆ

(B) ಚಿಕ್ಕ ಮಕ್ಕಳ

(C) ನೋಡಲು

(D) ಆಟಪಾಠ

(v) ಕ್ಷೋಭೆ - ಪದದ ಅರ್ಥ

(A) ಶೋಭೆ

(B) ತಳಮಳ

(C) ಕ್ಷಮೆ

(D) ಬರಗಾಲ

(vi) ಕೇಳೋಣ - ಈ ಪದದ ಧಾತುರೂಪ

(A) ಕೇಳಿದ

(B) ಕೇಳುವ

(C) ಕೇಳು

(D) ಕೇಳಿ

(vii) ಷಷ್ಠಿ ವಿಭಕ್ತಿ ಪ್ರತ್ಯಯವಿರುವ ಪದವಿದು

(A) ಸಾವಿತ್ರಿಯು

(B) ಸಾವಿತ್ರಿಯನ್ನು

(C) ಸಾವಿತ್ರಿಗೆ

(D) ಸಾವಿತ್ರಿಯಿಂದ

(viii) ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಸಮಯವನ್ನು ಸಂಶೋಧನೆಯಲ್ಲಿ ಕಳೆಯುತ್ತಾರೆ - ಇಲ್ಲಿರುವ ಅನ್ವರ್ಥಕ ನಾಮ

(A) ಸಮಯ

(B) ಸಂಶೋಧನೆ

(C) ಕಳೆ

(D) ವಿಜ್ಞಾನಿ

(ix) ಕ್ರಿಕೆಟ್ ಆಟದಲ್ಲಿ ನೂರನೆಯ ಪಂದ್ಯದಲ್ಲಿ ನೂರು ರನ್ ಹೊಡೆದವರು ಅತಿ ವಿರಳ - ಇಲ್ಲಿ ಇರುವ ಸಂಖ್ಯಾವಾಚಕ

(A) ನೂರನೆಯ

(B) ಪಂದ್ಯ

(C) ಕ್ರಿಕೆಟ್

(D) ನೂರು

(x) ________ ಇದು ಸರ್ವನಾಮ ಪದಕ್ಕೆ ಉದಾಹರಣೆ.

(A) ರಮೇಶ

(B) ನದಿ

(C) ಯಾರು

(D) ಕೃಷಿಕ

**6.** ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ. *5×1=5*

(i) ಭೀಮನು ಬಂಡಿ ಅನ್ನವನ್ನು ತಿಂದು ಮುಗಿಸುವನು-ನಿಷೇಧಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

(ii) ನಿನ್ನ ಸಹೋದರನು ನಿನ್ನ ಆಕಾಂಕ್ಷೆಗಳನ್ನು ಈ ಈಡೇರಿಸಿದನೇ ? - ವಿಧ್ಯರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

(iii) ಮಕ್ಕಳು ಕನ್ನಡ ಕಥೆ ಪುಸ್ತಕವನ್ನು ಓದಿದರು - ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

(iv) ಈ ಕೆಳಗಿನ ಗಾದೆ ಮಾಡಿದ ಅರ್ಥವನ್ನು ಬರೆಯಿರಿ. ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬರಲ್ಲ ಹಾಸಿಗೆ ಇದ್ದಷ್ಟು ಕಾಲು ಚಾಚು.

(v) ಘಾಸಿಗೊಳಿಸು - ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ.

**7.** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. *5×1=5*

(i) ಪುಟ್ಟಿ - ಥಳಥಳಿಸುವ ಬಾಲ ರವಿಯನ್ನು ಕಂಡುದು .........

(A) ಚಿತ್ರದಲಿ

(B) ರಂಗೋಲಿಯಲಿ

(C) ಆಕಾಶದಲಿ

(D) ನೀರಿನಲಿ

(ii) ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?

(A) ಚಿತ್ರ ಬಿಡಿಸುತ್ತಿದ್ದಾಳೆ

(B) ಅಡುಗೆ ಮಾಡುತ್ತಿದ್ದಾಳೆ

(C) ಮುಸುರೆ ತಿಕ್ಕುತ್ತಿದ್ದಾಳೆ

(D) ಓದುತ್ತಿದ್ದಾಳೆ

(iii) ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು ............. ಸ್ವಾತಂತ್ರ್ಯದಲ್ಲಿ.

(A) ರಾಜಕೀಯ

(B) ವಾಕ್

(C) ಚಲಿನವಲನ

(D) ಕ್ರಿಯಾ

(iv) ಅಕ್ಕಮಹಾದೇವಿಯ ವಚನಗಳ ಅಂಕಿತ

(A) ಗುಹೇಶ್ವರ (B) ಚನ್ನಮಲ್ಲಿಕಾರ್ಜುನ

(C) ಕೂಡಲಸಂಗಮದೇವ (D) ಸೋಮೇಶ್ವರ

(v) ____________ ಇದು ಕಡಿದು ಕೊರೆದು ತೇಯ್ದರೂ ಕಂಪ ಬಿಡದು.

(A) ಚಂದನ (B) ಸುವರ್ಣ

(C) ಕಬ್ಬು (D) ಸಕ್ಕರೆ

**PART – 2 : (40 ಅಂಕಗಳು)**

**SECTION C (Writing Skill)**

**(ಬರವಣಿಗೆ ಕೌಶಲ್ಯ) : 12 ಅಂಕಗಳು**

**8.** (a) ನಿಮ್ಮ ಹಳ್ಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ವಿನಂತಿಸಿಕೊಂಡು, ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ. *1×4=4*

**ಅಥವಾ (OR)**

(b) ದಿನಾಂಕ 1.2.2025 ರ 'ಚಂದನ ವಾಹಿನಿ'ಯ ಜಾಹೀರಾತಿನ ಮೇರೆ 'ಚಂದನ ವಾಹಿನಿ, ದೂರದರ್ಶನ ಕೇಂದ್ರ, ಜೆ.ಸಿ. ರಸ್ತೆ ಬೆಂಗಳೂರು' - ಇಲ್ಲಿ ಖಾಲಿ ಇರುವ 'ಕಾರ್ಯಕ್ರಮ ನಿರೂಪಕರ' ಹುದ್ದೆಗೆ ಅರ್ಜಿ ಬರೆಯಿರಿ.

**9.** ನಿಮ್ಮ ಶಾಲೆಯಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿಗಳಿಂದಲೇ ರಚಿತವಾದ ಚಿತ್ರಗಳ ಚಿತ್ರಕಲಾ ಮೇಳವನ್ನು ಕುರಿತು ವರದಿಯನ್ನು ಬರೆಯಿರಿ. *1×4=4*

**10.** ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. *1×4=4*

(i) ಮಹಿಳಾ ಸಬಲೀಕರಣ

(ii) ನಿರುದ್ಯೋಗ ಸಮಸ್ಯೆ

(iii) ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ

## SECTION D
## (Descriptive Type)
## (ಪಠ್ಯಗಳ ಅಧ್ಯಯನ) : 28 ಅಂಕಗಳು

**11.** ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ : *4×2=8*

(i) ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ ?

(ii) ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?

(iii) ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?

(iv) ಭಗತ್ ಸಿಂಗ್, ಜಲಿಯನ್ ವಾಲಾಬಾಗ್ ನ ಮಣ್ಣನ್ನು ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ ?

**12.** ಈ ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ : *2×3=6*

(i) ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು ?

(ii) ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?

**13.** ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ : *2×3=6*

(i) (a) ಸಾಮಾಜಿಕ ಕಾನೂನುಗಳ ಹರಿಕಾರ

**ಅಥವಾ (OR)**

(b) ಅವರಿಗೆ ಅವರವಕೆ ಪ್ರಜ್ಞೆಯೇ ದೇವರಾಗಿತ್ತು.

(ii) (a) ಹಸುರಾದುದು ಕವಿಯಾತ್ಮಂ

**ಅಥವಾ (OR)**

(b) ಜಾನಕಿಯ ಮಗನಿದಕೆ ಬೆದರುವನೆ

**14.** ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ : *1×4=4*

(a) ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯನ್ನು ಬರೆಯಿರಿ.

**ಅಥವಾ (OR)**

(b) ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

**15.** ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಗ್ಯಗಳಲ್ಲಿ ಉತ್ತರಿಸಿ : *1×4=4*

(a) ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ ?

**ಅಥವಾ (OR)**

(b) ಪಾಂಡವರು ಸೋದರರರೆಂದು ತಿಳಿದಾಗ ಕರ್ಣನ ಮನಸ್ಮುತಿಯನ್ನು ತಿಳಿಸಿ.